**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು–560003**

**KARNATAKA SECONDARY EDUCATION EXAMINATION BOARD**
**MALLESHWARAM, BENGALURU-560003**

**ಕೆ.ಓ.ಎಸ್. ಪರೀಕ್ಷೆ ಜುಲೈ – 2021**

# KOS EXAMINATION JULY – 2021

| | | |
|---|---|---|
| Subject / ವಿಷಯ | : | Business Studies<br>ವಾಣಿಜ್ಯ ಅಧ್ಯಯನ |
| Subject Code / ವಿಷಯ ಸಂಕೇತ | : | 215-NS |
| Maximum Marks / ಗರಿಷ್ಠ ಅಂಕಗಳು | : | 100 |
| Duration of Exam / ಪರೀಕ್ಷೆ ಅವಧಿ | : | 3 hours / 3 ಗಂಟೆಗಳು |
| Time alloted to read the Instructions /<br>ಸೂಚನೆಗಳನ್ನು ಓದಲು ನಿಗಧಿಗೊಳಿಸಿರುವ ಅವಧಿ : | : | 15 minutes / 15 ನಿಮಿಷಗಳು |
| Timings / ಸಮಯ | : | 9:30 AM – 12:45 PM |

## ಅಭ್ಯರ್ಥಿಗೆ ಸಾಮಾನ್ಯ ಸೂಚನೆಗಳು / General Instructions to the Candidate

1. ಅಭ್ಯರ್ಥಿಯು ತನ್ನ ನೋಂದಣಿ ಸಂಖ್ಯೆಯನ್ನು ಪ್ರವೇಶ ಪತ್ರದಲ್ಲಿರುವಂತೆ ಉತ್ತರ ಪತ್ರಿಕೆಯಲ್ಲಿ ನೀಡಿರುವ ಸ್ಥಳದಲ್ಲಿ ಸ್ಪಷ್ಟವಾಗಿ ಬರೆಯತಕ್ಕದ್ದು.

   Candidate should write their register number on the answer booklet as printed in their hall ticket.

2. ಅಭ್ಯರ್ಥಿಯು ಹೆಚ್ಚುವರಿ ಉತ್ತರ ಹಾಳೆಗಳನ್ನು ಪಡೆದಲ್ಲಿ, ಉತ್ತರ ಹಾಳೆಗಳ ಮುಖಪುಟದ ಮೇಲಿನ ನಿಗದಿತ ಸ್ಥಳದಲ್ಲಿ ನೋಂದಣಿ ಸಂಖ್ಯೆ ಬರೆಯತಕ್ಕದ್ದು.

   Candidate should write their register number on the additional answer sheets in the space provided.

3. ಅಭ್ಯರ್ಥಿಯು ನಿಗದಿಪಡಿಸಿದ ಸ್ಥಳವನ್ನು ಹೊರತುಪಡಿಸಿ ಇನ್ನಿತರೇ ಯಾವುದೇ ಪುಟಗಳಲ್ಲಿ ನೊಂದಣಿ ಸಂಖ್ಯೆ, ಗುರುತು, ಚಿಹ್ನೆ ಇನ್ನಿತರೆ ಯಾವುದೇ ಮಾಹಿತಿಗಳನ್ನು ಬರೆಯಬಾರದು. ಒಂದು ವೇಳೆ, ಈ ಬಗೆಯ ಯಾವುದೇ ಮಾಹಿತಿಗಳನ್ನು ಉತ್ತರ ಪತ್ರಿಕೆಯಲ್ಲಿ ಬರೆದ ಪಕ್ಷದಲ್ಲಿ ಅಂತಹ ಉತ್ತರ ಪತ್ರಿಕೆಯನ್ನು ಮೌಲ್ಯಮಾಪನಕ್ಕೆ ಪರಿಗಣಿಸುವುದಿಲ್ಲ.

   Candidate should not write register number, mark, sign or any other information in the answer booklet except in the specified place. In case, if found any information in the sheets of the answer scripts, such answer scripts will not be considered for evaluation.

4. ಪರೀಕ್ಷಾ ಸಮಯದಲ್ಲಿ ಅಭ್ಯರ್ಥಿಯು ಪರೀಕ್ಷಾ ಅವ್ಯವಹಾರದಲ್ಲಿ ತೊಡಗಿಸಿಕೊಂಡಿರುವುದು ಕಂಡುಬಂದಲ್ಲಿ ಹಾಗೂ ಪರೀಕ್ಷಾ ಸೂಚನೆಗಳನ್ನು ಉಲ್ಲಂಘಿಸಿದ್ದಲ್ಲಿ ಅಂತಹ ಅಭ್ಯರ್ಥಿಯ ವಿರುದ್ಧ ಪರೀಕ್ಷಾ ನಿಯಮಾನುಸಾರ ಶಿಸ್ತು ಕ್ರಮಕ್ಕೆ ಗುರಿಪಡಿಸಲಾಗುವುದು ಮತ್ತು ಅಂತಹ ಅಭ್ಯರ್ಥಿಯ ಉತ್ತರ ಪತ್ರಿಕೆಯನ್ನು ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದಿಲ್ಲ.

   Candidate found to be indulged in malpractice during examination and violating examination instructions, action will be taken against such candidate as per the examination rules and his/her answer booklet will not be considered for evaluation.

SEAL

*ಸೂಚನೆಗಳು:* 1. *ಎಲ್ಲಾ ಪ್ರಶ್ನೆಗಳೂ ಕಡ್ಡಾಯ.*

2. *ಪ್ರಶ್ನೆ ಸಂಖ್ಯೆಗಳನ್ನು ಉತ್ತರ ಪತ್ರಿಕೆಯಲ್ಲಿ ನಮೂದಿಸಿ.*

3. *ಉತ್ತರಗಳು ನೇರವಾಗಿರಲಿ ಹಾಗೂ ಸಂಕ್ಷಿಪ್ತವಾಗಿರಲಿ.*

**I. ಕೆಳಗೆ ಖಾಲಿ ಬಿಟ್ಟ ಸ್ಥಳಗಳನ್ನು ಭರ್ತಿ ಮಾಡಿ :** **(5 × 1 = 5)**

1) ಮನುಷ್ಯರು ಕೈಗೊಳ್ಳುವ ಯಾವುದೇ ಚಟುವಟಿಕೆಗಳನ್ನು ________ ಚಟುವಟಿಕೆಗಳು ಎನ್ನಲಾಗುತ್ತದೆ.

2) ನಮ್ಮ ನಡವಳಿಕೆಗಳು ಬೇರೆಯವರಿಗೆ ________ ವಾಗಿರಬಾರದು.

3) ಸಹಕಾರಿ ಸಂಘಗಳು________ ಕೊರತೆಯಿಂದ ನರಳುತ್ತವೆ.

4) ಸಮುದ್ರ ಸಾರಿಗೆಯು ________ ವ್ಯಾಪಾರಕ್ಕೆ ಸಹಕಾರಿಯಾಗಿದೆ.

5) ವ್ಯಕ್ತಿಯ ಕೊಳ್ಳುವ ಸಾಮರ್ಥ್ಯವು ಅವನ ________ ಮೇಲೆ ಅವಲಂಬಿತವಾಗಿದೆ.

**II. ಕೆಳಕಂಡ ವಾಕ್ಯಗಳು ಸರಿಯೋ ಅಥವಾ ತಪ್ಪೋ ತಿಳಿಸಿ :** **(5 × 1 = 5)**

1) ಏಕವ್ಯಕ್ತಿ ವ್ಯಾಪಾರ ಸಂಸ್ಥೆಯ ಮಾಲಿಕರು ಸಂಸ್ಥೆಯ ಅಥವಾ ವ್ಯವಹಾರದ ಗೌಪ್ಯತೆ ಕಾಪಾಡಲು ಸಾಧ್ಯ.

2) ವಾಯು ಸಾರಿಗೆಯು ಅತೀ ವೇಗದ ಸಾರಿಗೆಯಾಗಿದೆ.

3) ವೇಗದ ಅಂಚೆ ಸೌಲಭ್ಯಗಳು ಎಲ್ಲಾ ಅಂಚೆ ಕಛೇರಿಗಳಲ್ಲೂ ಲಭ್ಯ ಇವೆ.

4) ವಿದ್ಯಾರ್ಥಿಗಳಿಗೆ ಕಡಿಮೆ ಬಡ್ಡಿದರದಲ್ಲಿ ಉನ್ನತ ಶಿಕ್ಷಣಕ್ಕಾಗಿ ಸಾಲ ನೀಡುತ್ತಾರೆ.

5) ಗ್ರಾಹಕರನ್ನು ಪ್ರಾಯೋಜಕರು ಜಾಹೀರಾತಿನ ಮೂಲಕ ನೇರ ಭೇಟಿ ಮಾಡುವರು.

**III. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ :** **(10 × 1 = 10)**

1) ವ್ಯವಹಾರ ಎಂದರೇನು?

2) ವಿತರಣಾ ಮಾರ್ಗ ಎಂದರೇನು?

3) ಕೈಗಾರಿಕೆ ಎಂದರೇನು?

4) ಏಕವ್ಯಕ್ತಿ ವ್ಯಾಪಾರಿ ಸಂಸ್ಥೆ ಎಂದರೇನು?

5) ಸಾರಿಗೆ ಎಂದರೇನು?

6) ದಾಸ್ತಾನು ಮಳಿಗೆ ಎಂದರೇನು?

7) ಗ್ರಾಹಕ ಎಂದರೇನು?

8) ಸ್ವಯಂ ಉದ್ಯೋಗ ಎಂದರೇನು?

9) ಬ್ಯಾಂಕು ಠೇವಣಿಗಳ ಎರಡು ಬಗೆಗಳನ್ನು ಹೆಸರಿಸಿ.

10) ಪಾಲುದಾರಿಕೆ ಎಂದರೇನು?

**IV. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಎರಡು ವಾಕ್ಯದಲ್ಲಿ ಉತ್ತರಿಸಿ :** **(15 × 2 = 30)**

1) ವ್ಯವಹಾರದ ಯಾವುದಾದರೂ ಎರಡು ಲಕ್ಷಣಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

2) ಯಾವುದಾದರೂ ಎರಡು ಆರ್ಥಿಕ ಉದ್ದೇಶಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

3) ಪರಿಸರ ಮಾಲಿನ್ಯದ ಎರಡು ಬಗೆಗಳನ್ನು ಸಂಕ್ಷಿಪ್ತವಾಗಿ ತಿಳಿಸಿ.

[ Turn over

4) ಬಹುರಾಷ್ಟ್ರೀಯ ಕಂಪನಿಗಳ ಎರಡು ಲಕ್ಷಣಗಳನ್ನು ತಿಳಿಸಿ.

5) ರಸ್ತೆ ಸಾರಿಗೆಯ ಯಾವುದಾದರೂ ಎರಡು ಅನುಕೂಲಗಳನ್ನು ತಿಳಿಸಿ.

6) ಸಂಪರ್ಕ ಸಾಧನದ ಯಾವುದಾದರೂ ನಾಲ್ಕು ಬಗೆಗಳನ್ನು ಹೆಸರಿಸಿ.

7) ಅಂಚೆ ಸೇವೆಯ ಯಾವುದಾದರೂ ಎರಡು ಪ್ರಾಮುಖ್ಯತೆಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

8) ಬ್ಯಾಂಕ್‌ನ ಯಾವುದಾದರೂ ನಾಲ್ಕು ವಿಧಗಳನ್ನು ಹೆಸರಿಸಿ.

9) ಸಗಟು ವ್ಯಾಪಾರಿಯ ಯಾವುದಾದರೂ ಎರಡು ಕಾರ್ಯಗಳನ್ನು ಸಂಕ್ಷಿಪ್ತವಾಗಿ ತಿಳಿಸಿ.

10) ಚೆಕ್‌ನ ಎರಡು ವಿಧಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

11) ಆದಾಯದ ಎರಡು ಮೂಲಗಳನ್ನು ಸಂಕ್ಷಿಪ್ತವಾಗಿ ತಿಳಿಸಿ.

12) ಸ್ವಂತ ಉದ್ಯೋಗದಲ್ಲಿ ಯಶಸ್ವಿಯಾಗಲು ಇರಬೇಕಾದ ಯಾವುದಾದರೂ ಎರಡು ಗುಣಗಳನ್ನು ತಿಳಿಸಿ.

13) ಜಾಹೀರಾತು ನೀಡಲು ಸೂಕ್ತವಾಗುವ ಎರಡು ಮಾಧ್ಯಮಗಳನ್ನು ಹೆಸರಿಸಿ.

14) ಸೂಪರ್ ಬಜಾರ್‌ನ ಯಾವುದಾದರೂ ಎರಡು ಅನಾನುಕೂಲಗಳನ್ನು ಸಂಕ್ಷಿಪ್ತವಾಗಿ ತಿಳಿಸಿ.

15) ಗ್ರಾಹಕರು ಅನುಭವಿಸುತ್ತಿರುವ ಎರಡು ತೊಂದರೆಗಳನ್ನು ಹೆಸರಿಸಿ.

V. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಐದು ಅಥವಾ ಆರು ವಾಕ್ಯಗಳಲ್ಲಿ ಮೀರದಂತೆ ಉತ್ತರಿಸಿ : (10 × 3 = 30)

1) ಇ–ಕಾಮರ್ಸ್‌ನಿಂದಾಗುವ ಮೂರು ಅನುಕೂಲಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

2) ಏಕವ್ಯಕ್ತಿ ವ್ಯಾಪಾರಿ ಸಂಸ್ಥೆಯ ಯಾವುದಾದರೂ ಮೂರು ಲಕ್ಷಣಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

3) ಸಂಪರ್ಕ ಸಾಧನದ ಮೂರು ಅಂಶಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

4) ವಾಣಿಜ್ಯಪತ್ರದ ಯಾವುದಾದರೂ ಮೂರು ಪ್ರಾಮುಖ್ಯತೆಗಳನ್ನು ಸಂಕ್ಷಿಪ್ತವಾಗಿ ತಿಳಿಸಿ.

5) ವಿನಿಮಯ ಪತ್ರದಲ್ಲಿ ಇರುವ ಮೂರು ವ್ಯಕ್ತಿಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

6) ಚಿಲ್ಲರೆ ವ್ಯಾಪಾರಿಯ ಮೂರು ಕಾರ್ಯಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

7) ದೊಡ್ಡ ಪ್ರಮಾಣದ ಚಿಲ್ಲರೆ ವ್ಯಾಪಾರಿಗಳ ವಿಧಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

8) ಬಹುಶಾಖಾ ಅಂಗಡಿಗಳ ಮೂರು ಅನಾನುಕೂಲಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

9) ಒಬ್ಬ ವ್ಯಕ್ತಿಯು ಉಳಿತಾಯ ಮಾಡಲು ಇರುವ ಮೂರು ಪ್ರಮುಖ ಕಾರಣಗಳನ್ನು ವಿವರಿಸಿ.

10) ವಸ್ತುಗಳನ್ನು ಕೊಳ್ಳುವ ಮುನ್ನ ಯಾವ–ಯಾವ ವಿಷಯಗಳನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳುವಿರಿ? ಸಂಕ್ಷಿಪ್ತವಾಗಿ ವಿವರಿಸಿ.

[ Turn over

**VI. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಎಂಟು ವಾಕ್ಯಗಳಲ್ಲಿ ಉತ್ತರಿಸಿ :** **(5 × 4 = 20)**

1) ಸಂಯುಕ್ತ ಬಂಡವಾಳ ಸಂಸ್ಥೆಯ ಯಾವುದಾದರೂ ನಾಲ್ಕು ಅನುಕೂಲಗಳನ್ನು ವಿವರಿಸಿ.

2) ದಾಸ್ತಾನು ಮಳಿಗೆಯ ನಾಲ್ಕು ಅವಶ್ಯಕತೆಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

3) ವೈಯಕ್ತಿಕ ಮಾರಾಟದ ನಾಲ್ಕು ಗುಣಲಕ್ಷಣಗಳನ್ನು ವಿವರಿಸಿ.

4) ಗ್ರಾಹಕರಿಗೆ ಇರುವ ನಾಲ್ಕು ಹಕ್ಕುಗಳನ್ನು ವಿವರಿಸಿ.

5) ಖರ್ಚಿನ ಯಾವುದಾದರೂ ನಾಲ್ಕು ಮಾರ್ಗಗಳನ್ನು ವಿವರಿಸಿ.

Do not write on this area